ತಲಕಾಡು ಶ್ರೀನಿಧಿ, ಬೆಂಗಳೂರು

*ಬಹಳ ಕನಸುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಏಕೆ ಗುರುಗಳೆ?*



ಡೌನ್‌ಲೋಡ್ ಎರರ್. ತಲೆಯಲ್ಲಿನ ಜಂಕ್ ಫೈಲ್‌ಗಳನ್ನು ಡಿಲೀಟ್ ಮಾಡಿ, ಮತ್ತೆ ನಿದ್ರಿಸಿ ಪ್ರಯತ್ನಿಸಿ.

ಆರ್. ಮಧುಸೂದನ್, ಹಾಸನ

*ಎಲ್ಲ ಭಾಗ್ಯಗಳಿಗಿಂತ ಶ್ರೇಷ್ಠವಾದ ಭಾಗ್ಯ ಯಾವುದು ರಾಮ್?*

ತಿಕ್ಕಲುಭಾಗ್ಯಗಳ ನಿಷೇಧಭಾಗ್ಯ.

ಪಿ.ಜಿ. ರಾಘವೇಂದ್ರ, ಮೈಸೂರು

*ಎಷ್ಟೇ ದೊಡ್ಡ ಮೊತ್ತವಾದರೂ ಅಕ್ಷರದಲ್ಲಿ ಬರೆಯುವಾಗ ಓನ್ಲೀ ಎಂದು ಬರೆಯುವುದೇಕೆ?*

ಎಷ್ಟೇ ಕೊಟ್ಟರೂ ಇಟ್ಟಿದ್ದಕ್ಕಿಂತ ಕೊಟ್ಟಿದ್ದು ಕಡಿಮೆಯೇ ಆಗಿರುವುದರಿಂದ.

ವಿ. ಹಮೀದ್, ವಿಟ್ಲ

*ಮಂತ್ರಿಗಳನ್ನು ಭೇಟಿ ಮಾಡಲು ಹೋಗುವಾಗ ಏನು ತೆಗೆದುಕೊಂಡು ಹೋಗಬೇಕು?*

ವಾಚ್‌ಮನ್, ನಾಯಿ ಇಲ್ಲದಿದ್ದರೆ... ಗೇಟು ತೆಗೆದುಕೊಂಡು ಹೋಗಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

*ರಾಜಕಾರಣಿಗಳನ್ನೇಕೆ ಕತ್ತೆಗೆ ಹೋಲಿಸುತ್ತಾರೆ?*



ಕಾಗದವನ್ನೂ ಬಿಡದೆ ತಿನ್ನುವ, ಹಿಂಬಾಲಕರನ್ನು ಒದ್ದು ಮುಂದೆ ಸಾಗುವ ಗುಣ ಇರುವುದರಿಂದ.

ಕೆ.ಎಂ. ವಿಭೂತಿ, ಹರಿಹರ

*ಯಾವುದೇ ತಪ್ಪಿನಲ್ಲಿ ಸಿಕ್ಕಿಬಿದ್ದರೂ ರಾಜಕಾರಣಿಗಳು 'ಈ ವಿಷಯ ಸತ್ಯಕ್ಕೆ ದೂರ' ಎನ್ನುವುದು ಏಕೆ?*

ಸತ್ಯದ ಆಲಯವಾದ ಕೋರ್ಟಿನಿಂದ ದೂರ ಓಡಲು ಆರಂಭಿಸಿರುವುದರಿಂದ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಗಗನಸಖಿಯು ವಿಧಾನಸೌಧದ ಸ್ಪೀಕರ್ ಆದರೆ ಭಾಷಣದ ಪ್ರಾರಂಭ ಹೇಗಿರುತ್ತೆ?*

ಗುಡ್ ಮಾರ್ನಿಂಗ್.... ಸಿನ್ಸ್ ದ ಸೆಷನ್ ಮೇ ಫೇಸ್ ರಫ್ ವೆದರ್, ಪ್ಲೀಸ್ ಫ್ಯಾಸನ್ ಯುವರ್ ಸೀಟ್ ಬೆಲ್ಟ್ಸ್.....

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಪ್ರತಿಯೊಂದು ವಾಹಿನಿಯೂ ಒಬ್ಬೊಬ್ಬ ಗುರೂಜಿಯನ್ನು ಜತೆ ಮಾಡಿಕೊಂಡಿದೆಯಲ್ಲಾ, ಏಕೆ?*

ಅಜ್ಞಾನಕ್ಕಿರುವ ಸೆಳೆತ ವಿಜ್ಞಾನಕ್ಕಿಲ್ಲದಿರುವುದರಿಂದ.

ರಮೇಶ್ ಹಿಪ್ಪಳಗಾವೆ, ಬೀದರ್

*ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿಗಳೇಕೆ ಇರಬಾರದು?*

ಸಣ್ಣಮಕ್ಕಳ ಗಲಾಟೆಗೆ ಸರಕಾರಿ ಶಿಕ್ಷಕರಿಗೆ ನಿದ್ರಾಭಂಗವಾಗುವ ಕಾರಣ ಹಮ್ಮಿಕೊಂಡಿಲ್ಲವಂತೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಏಸ್ಸಾರ್, ಎಸ್‌ಎಸ್‌ಎಲ್‌ಸಿ/ಪಿಯುಸಿ ಫಲಿತಾಂಶದಲ್ಲಿ ಬಾಲಕರು ಮೇಲುಗೈ ಸಾಧಿಸುವುದೇ ಇಲ್ವಾ?*

ಊಹೂಂ. ಅಷ್ಟುಹೊತ್ತಿಗೆ ಹುಡುಗಿಯರನ್ನು ಹಿಂಬಾಲಿಸುವುದನ್ನು ಕಲಿತುಬಿಟ್ಟಿರುತ್ತಾರಲ್ಲ!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಉಪ್ಪು, ಉಪ್ಪಿನಕಾಯಿಯನ್ನು ಊಟದ ಎಲೆಯ ಎಡ ತುದಿಯಲ್ಲಿಯೇ ಏಕೆ ಬಡಿಸುತ್ತಾರೆ?*

ಅದು ಜೆಡಿಎಸ್ ಇದ್ದಂತೆ; ರುಚಿಗೆ ಅಗತ್ಯವಾದರೆ ಸೆಳೆದುಕೊಳ್ಳಲು, ಇಲ್ಲವಾದರೆ ಬಿಡಲು ಅದೇ ಸೂಕ್ತ ಸ್ಥಳ.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಎಲ್ಲದಕ್ಕೂ ಕೊನೆ ಎಂಬುದಿದೆ. ಈ ವಿಭಾಗಕ್ಕೆ ಕೊನೆ ಯಾವಾಗ?*

ಕಟ್ಟಕಡೆಯ ಕನ್ನಡಿಗ ನಗುವುದು ಅಪರಾಧ ಎಂದು ಭಾವಿಸಿದ ದಿನ.

ಮೋಹನ ರು. ಹಣಗಿ, ಅಮೀನಗಡ

*ಮಡದಿಯನ್ನು ಮುದ್ದಿಸುವಾಗ ಮತ್ತು ದೇವರಿಗೆ ಕೈ ಮುಗಿಯುವಾಗ ಮನುಷ್ಯ ಕಣ್ಣು ಮುಚ್ಚುವುದೇಕೆ?*

ಮನದಲ್ಲಿ ಮೂಡಿದ ಕಲ್ಪನೆಗೆ ವಾಸ್ತವ ಭಂಗ ತರದಿರಲೆಂದು.

## ಬಹುಮಾನಿತ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ

*ಕಣ್ಣೀರಿಗೆ ಎಂತಹ ಶಕ್ತಿ ಇದೆ? ಅದನ್ನು ಅಳೆಯುವುದು ಹೇಗೆ?*

ಕಣ್ಣೀರಿಗೆ ದಿನವೂ ಲಕ್ಷಾಂತರ ರೂಗಳನ್ನು ಸೆಳೆಯುವ ಶಕ್ತಿ ಇದೆ. ಅದನ್ನು ಸೀರಿಯಲ್ ಟಿಆರ್‌ಪಿ ಮೂಲಕ ಅಳೆಯಲಾಗುತ್ತದೆ.

ರತ್ನಜ, ಮೈಸೂರು

*ಡ್ರೈವಿಂಗ್ ಲೈಸೆನ್ಸ್, ಇನ್ಶೂರೆನ್ಸ್, ಹೆಲ್ಮೆಟ್ ಇಲ್ಲದೆ ಟೂವೀಲರ್‌ನಲ್ಲಿ ಒನ್ವೇಲಿ ತ್ರಿಬಲ್ ರೈಡ್ ಮಾಡಿದರೆ ಫೈನ್ ಎಷ್ಟು?*

ಫೈನ್ ಇಲ್ಲ; ಬದಲಿಗೆ ಹಿಡಿದ ಪೇದೆಯ ಮನೆಯಲ್ಲಿ ಮರುದಿನ ಸೂಪರ್ ಫೈನ್ ಹಬ್ಬ!

ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

*ಆ ಮರ, ಈ ಮರದಲ್ಲಿರುವ ರಾಮ ಹೆಚ್ಚೋ, ಮೂರ್ತಿಯಲ್ಲಿರುವ ರಾಮ ಹೆಚ್ಚೋ ರಾಮ್‌ಜೀ?*

ಮರದಲ್ಲಿರುವ ರಾಮನೇ; ಆಕೃತಿಗಿಂತ ಪ್ರಕೃತಿಯೇ ಎಂದೆಂದಿಗೂ ಶ್ರೇಷ್ಠ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಹಲವಾರು ವರುಷಗಳಿಂದ ಸಂಪಾದಿಸಿದ ಒಳ್ಳೆಯ ಹೆಸರು ಕೆಲವೇ ನಿಮಿಷಗಳಲ್ಲಿ ಕೆಡಲು ಕಾರಣವೇನು?*




ಬೆಲೂನು ನಿಯಮ; ಮುಳ್ಳೇ ಬೆಲೂನಿಗೆ ತಗುಲಿದರೂ, ಬೆಲೂನೇ ಮುಳ್ಳಮೇಲೆ ಬಿದ್ದರೂ ಢಬ್ & ಠುಸ್ ಅನಿವಾರ್ಯ!

ರಮೇಶ್, ಹನುಮನಾಳು

*ಸುಂದರ ಕನಸು ಮೂಡಲಿ, ಶುಭರಾತ್ರಿ ಎಂದವಳೇ ನಿದ್ರಿಸಲು ಬಿಡದೆ ಕನಸಿನಲ್ಲಿ ಕಾಡುತ್ತಿದ್ದಾಳಲ್ಲಾ...?*

ರಗ್ಗು ಹೊದ್ದು ಮಲಗದೆ ಹಗಲುಗನಸು ಹೊದ್ದು ಮಲಗಿದ್ದು ನಿಮ್ಮದೇ ತಪ್ಪು.

ಎಸ್.ಜಿ. ಕರನಂದಿ, ಹುನಗುಂದ

*ಸರ್ಕಾರಗಳು ಬ್ರಹ್ಮಚಾರಿಗಳಿಗೆ ಮದುವೆ ಭಾಗ್ಯ ನೀಡಿದರೆ ಅನುಕೂಲ ಅಲ್ಲವೇ?*

'ಮಠಭಾಗ್ಯ ನೀಡಿ; ಭೋಗಭಾಗ್ಯ ನಾವೇ ಹೊಂದಿಸಿಕೊಳ್ಳುತ್ತೇವೆ' ಎಂದರಂತೆ ಬ್ರಹ್ಮಚಾರಿಗಳು.

■ ರಾಮ್